# ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ, ಮಹಾರಾಷ್ಟ್ರ

*[ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (ಭಾ. ಕೃ. ಅ. ಪ), ಕೃಷಿ ಮಂತ್ರಾಲಯ, ಭಾರತ ಸರ್ಕಾರ]*


## ಹತ್ತಿ ಬೆಳೆಯ ಸಾಪ್ತಾಹಿಕ ಸಲಹೆ, ಆಗಸ್ಟ್ 27 ರಿಂದ 02 ಸೆಪ್ಟೆಂಬರ್ 2026 ರ ಅವಧಿಗೆ

*"ಈ ಸಲಹೆಯು ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳಿಂದ ಸ್ವೀಕರಿಸಿದ ಮಾಹಿತಿಯನ್ನು ಆಧರಿಸಿದೆ"*

### ಅ. ಮಣ್ಣಿನ ಆರೋಗ್ಯ, ಪೋಷಣೆ, ಹಾಗೂ ಕೀಟ ಮತ್ತು ರೋಗ ನಿರ್ವಹಣೆಯ ಕುರಿತಾದ ಸಾಮಾನ್ಯ ಸಲಹೆ

ಹೆಚ್ಚಿನ ಹತ್ತಿ ಇಳುವರಿಯು ಸಮತೋಲಿತ ಮಣ್ಣಿನ ಪೋಷಣೆ, ನೀರಿನ ನಿರ್ವಹಣೆ ಮತ್ತು ಪೂರ್ವಭಾವಿ ನಿರೀಕ್ಷಣೆ ಆಧಾರಿತ ಕೀಟ ಮತ್ತು ರೋಗ ನಿರ್ವಹಣೆಯನ್ನು ಅವಲಂಬಿಸಿದೆ. ಸಂಪೂರ್ಣ ಮತ್ತು ಸಮಗ್ರ ಬೆಳೆ ನಿರ್ವಹಣಾ ಯೋಜನೆಯನ್ನು ಅನುಷ್ಠಾನಗೊಳಿಸುವುದರಿಂದ ಸರಿಯಾದ ಬೆಳವಣಿಗೆ ಮತ್ತು ಚೈತನ್ಯವನ್ನು ಖಚಿತಪಡಿಸುವುದರೊಂದಿಗೆ ಬೇಸಾಯ ವೆಚ್ಚವನ್ನು ಕಡಿಮೆ ಮಾಡುತ್ತದೆ. ಇದಲ್ಲದೇ, ಬೆಳೆಯನ್ನು ವಿನಾಶಕಾರಿ ಕೀಟ ಮತ್ತು ರೋಗ ಹಾನಿಯಿಂದ ರಕ್ಷಿಸುತ್ತದೆ.

#### ಮಣ್ಣಿನ ಆರೋಗ್ಯ ಮತ್ತು ಪೋಷಕಾಂಶ ನಿರ್ವಹಣೆ (INM)

- **ಸೂಕ್ಷ್ಮ ಪೋಷಕಾಂಶಗಳನ್ನು ಅತ್ಯುತ್ತಮವಾಗಿಸಿ:** ಬೆಳೆ ತಿರುಗುವಿಕೆ, ಸಾವಯವ ಗೊಬ್ಬರ ಮತ್ತು ಹೊದಿಕೆ ಬೆಳೆಗಳಿಗೆ ಆದ್ಯತೆ ನೀಡುವ ಮೂಲಕ ಮತ್ತು ಬಿತ್ತನೆ ಪೂರ್ವ ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ತರ್ಕಬದ್ಧ ರಾಸಾಯನಿಕ ಗೊಬ್ಬರವನ್ನು ಬಳಸುವ ಮೂಲಕ ಮಣ್ಣಿನ ಆರೋಗ್ಯವನ್ನು ಸುಧಾರಿಸಿ.

- **ಸೂಕ್ಷ್ಮ ಪೋಷಕಾಂಶಗಳನ್ನು ಅನ್ವಯಿಸಿ:** ಅಗತ್ಯವಿರುವಂತೆ ಉದ್ದೇಶಿತ ಸಿಂಪಡಣೆಗಳ ಮೂಲಕ ದ್ವಿತೀಯ ಮತ್ತು ಸೂಕ್ಷ್ಮ ಪೋಷಕಾಂಶಗಳ ಕೊರತೆಗಳನ್ನು (ಸತು, ಬೋರಾನ್, ಮ್ಯಾಂಗನೀಸ್ ಮತ್ತು ಮೆಗ್ನೀಸಿಯಮ್‌ನಂತಹ) ಪೂರ್ವಭಾವಿಯಾಗಿ ಪರಿಹರಿಸಿ.

#### ರೋಗ ನಿರ್ವಹಣೆ (IDM)

- **ರೋಗ ತಡೆಗಟ್ಟುವ ಪದ್ಧತಿಗಳನ್ನು ನಿಯೋಜಿಸಿ:** ಮಣ್ಣಿನಿಂದ ಹರಡುವ ಮತ್ತು ಎಲೆಗಳಿಂದ ಹರಡುವ ರೋಗಕಾರಕಗಳ ನಿರ್ವಹಣೆಯನ್ನು ಸಮಗ್ರ ಕೃಷಿ ಪದ್ಧತಿಗಳ ಮೂಲಕ ಸಾಧಿಸಬೇಕು, ಇದರಲ್ಲಿ ಸರಿಯಾದ ಕ್ಷೇತ್ರ ನೈರ್ಮಲ್ಯ, ಜೈವಿಕ ಕೀಟನಾಶಕಗಳು ಮತ್ತು ಜೈವಿಕ ಗೊಬ್ಬರಗಳನ್ನು ಬೀಜ ಮತ್ತು ಮಣ್ಣಿನ ಉಪಚಾರಗಳಾಗಿ ಅನ್ವಯಿಸುವುದು, ಸಸ್ಯ ಆರೋಗ್ಯವನ್ನು ಹೆಚ್ಚಿಸಲು ಮತ್ತು ರೋಗದ ಸಂಭವವನ್ನು ನಿಗ್ರಹಿಸಲು ಸಹಾಯ ಮಾಡುತ್ತದೆ.
- **ಏಕಾಏಕಿ ರೋಗ ಪ್ರಸಾರ ನಿಯಂತ್ರಣ:** ಹೆಚ್ಚಿನ ಆರ್ದ್ರತೆಯ ಅವಧಿಯಲ್ಲಿ ನಿಯಮಿತ ಕ್ಷೇತ್ರ ಮೇಲ್ವಿಚಾರಣೆಯನ್ನು ಕೈಗೊಳ್ಳಬೇಕು ಮತ್ತು ಚಾಲ್ತಿಯಲ್ಲಿರುವ ಪರಿಸರ ಪರಿಸ್ಥಿತಿಗಳು ತ್ವರಿತ ರೋಗ ಬೆಳವಣಿಗೆ ಮತ್ತು ಹರಡುವಿಕೆಗೆ ಅನುಕೂಲಕರವಾದಾಗ ಮಾತ್ರ ಶಿಫಾರಸು ಮಾಡಲಾದ ಶಿಲೀಂಧ್ರನಾಶಕಗಳನ್ನು ವಿವೇಚನೆಯಿಂದ ಅನ್ವಯಿಸಬೇಕು.

#### ಸಮಗ್ರ ಕೀಟ ನಿರ್ವಹಣೆ (IPM)

- ಕ್ಷೇತ್ರ ಶೋಧನೆ ನಡೆಸುವುದು: ಕಾಯಿಕೊರಕಗಳ ಜೊತೆಗೆ ರಸ ಹೀರುವ ಕೀಟಗಳನ್ನು (ಥ್ರಿಪ್ಸ್ ನುಸಿ , ಹೇನು, ಜಿಗಿ ಹುಳುಗಳು, ಮತ್ತು ಜೇಡ ಹುಳಗಳು) ನಿರೀಕ್ಷಣೆ ಮಾಡಲು ವಾರಕ್ಕೊಮ್ಮೆ ಕ್ಷೇತ್ರ ಶೋಧನೆ ಮಾಡಿ.
- ಜಿಗುಟು ಬಲೆ ಮತ್ತು ಜೈವಿಕ ಕೀಟನಾಶಕಗಳನ್ನು ಬಳಸಿ: ವಯಸ್ಕ ಪತಂಗಗಳ ಹಾರಾಟವನ್ನು ಪತ್ತೆಹಚ್ಚಲು ಹಾಗೂ ಮೊಟ್ಟೆ ಇಡುವ ಚಕ್ರಗಳನ್ನು ಊಹಿಸಲು ಋತುವಿನ ಆರಂಭದಲ್ಲಿ ಲಿಂಗಾಕರ್ಷಕ ಬಲೆಗಳನ್ನು ನೆಡಬೇಕು. ಪ್ರಾಥಮಿಕ ಪ್ರತಿಕ್ರಿಯೆಯಾಗಿ ಸಾವಯವ, ನೈಸರ್ಗಿಕ ಅಥವಾ ಸಸ್ಯ ಆಧಾರಿತ ಕೀಟನಾಶಕಗಳನ್ನು ಸಿಂಪಡಿಸಬೇಕು.
- ನೈಸರ್ಗಿಕ ಮಿತ್ರಕೀಟಗಳನ್ನು ಸಂರಕ್ಷಿಸಿ: ವ್ಯಾಪಕ ವ್ಯಾಪ್ತಿಯ ರಾಸಾಯನಿಕಗಳಿಗಿಂತ ನಿರ್ದಿಷ್ಟ ಕೀಟನಾಶಕಗಳನ್ನು ಆರಿಸುವ ಮೂಲಕ ಮಿತ್ರ ಕೀಟಗಳ ಸಂರಕ್ಷಣೆ ಮಾಡಬೇಕು.
- ರಾಸಾಯನಿಕ ಬಳಕೆ ನಿರ್ಬಂಧಿಸಿ: ಕೀಟಗಳ ಸಂಖ್ಯೆಯು ಆರ್ಥಿಕ ಗರಿಷ್ಟ ಮಿತಿಯನ್ನು ತಲುಪಿದಾಗ ಮಾತ್ರ, ಲೇಬಲ್-ಶಿಫಾರಸು ಮಾಡಿದ ರಾಸಾಯನಿಕ ಕೀಟನಾಶಕಗಳನ್ನು ಕೊನೆಯ ಉಪಾಯವಾಗಿ ಬಳಸಬೇಕು.

## ಬ. ನಿರ್ದಿಷ್ಟ ಸ್ಥಳಕ್ಕೆ ಸಂಬಂಧಿಸಿದ ಸಲಹೆ

| ಕರ್ನಾಟಕ | ಕಳೆದ ವಾರದಲ್ಲಿ ಬಿದ್ದ ಮಳೆಯ ವಿವರ (ಮಿ.ಮೀ) | | | | | | IMDಯ ಪ್ರಕಾರ ಮಳೆಯ ಮುನ್ಸೂಚನೆ (ಮಿ.ಮೀ) | | | | | |
|---|---|---|---|---|---|---|---|---|---|---|---|---|
| ತಿಂಗಳು | ಆಗಸ್ಟ್ | | | | | | | | | | | |
| ದಿನಾಂಕ | 18 | 19 | 20 | 21 | 22 | 23 | 24 | 26 | 27 | 28 | 29 | 30 |
| ಧಾರವಾಡ | 0.2 | 1.4 | 3.2 | 0 | 2.4 | 0.4 | 0 | 1.7 | 1 | 0.9 | 1.2 | 0.5 |
| ಹಾವೇರಿ | 1 | 3 | 6 | 0 | 4 | 3 | 1 | 2.1 | 1.3 | 1 | 1.1 | 0.8 |
| ಮೈಸೂರು | 1 | 28 | 0 | 0 | 0 | 1 | 10 | 4 | 1.9 | 0.2 | 0.5 | 0.3 |

| ಮಳೆಯ ಮಾಹಿತಿಯ ಮಾದರಿ | | | | | | ಮಳೆಯ ಮಾಹಿತಿಯ ಮೂಲ: |
|---|---|---|---|---|---|---|
| ಮಳೆಯ ಪ್ರಮಾಣ (ಮಿ.ಮೀ) | 0.1-2.4 | 2.5-15.5 | 15.6-64.4 | 64.5-115.5 | 115.6-204.4 | http://nwp.imd.gov.in/bias/dist_fcst.htm |

**ಬೆಳೆಯ ಸ್ಥಿತಿ:**

ಧಾರವಾಡದಲ್ಲಿ ಬೆಳೆಯು ಹೂಬಿಡುವ ಹಾಗೂ ಕಾಯಿ ಕಟ್ಟುವ ಹಂತದಲ್ಲಿದ್ದು (57 ರಿಂದ 62 ದಿನಗಳು), ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಲ್ಲಲ್ಲಿ ಮಳೆಯಾಗಿದೆ. ಕಳೆ ನಿರ್ವಹಣೆಗಾಗಿ ಕೈಯಿಂದ ಕಳೆ ತೆಗೆಯುವುದು ಮತ್ತು ಅಂತರ ಬೇಸಾಯದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೆಲವು ಹೊಲಗಳಲ್ಲಿ ಕಳೆಗಳ ಬಾಧೆ ಕಂಡುಬಂದಿದೆ. ಮೂತಿ ಹುಳು, ಎಲೆ ಜಿಗಿ ಹುಳು ಮತ್ತು ಹೇನುಗಳ ಬಾಧೆ ಕಡಿಮೆ ಪ್ರಮಾಣದಲ್ಲಿದ್ದರೆ, ಥ್ರಿಪ್ಸ್ (ನುಸಿ) ಬಾಧೆ ಮಧ್ಯಮ ಪ್ರಮಾಣದಲ್ಲಿದೆ. ಕೆಲವು ಹೊಲಗಳಲ್ಲಿ ಆಲ್ಟರ್ನೇರಿಯಾ ಎಲೆಚುಕ್ಕೆ ರೋಗದ ಲಕ್ಷಣಗಳು ವರದಿಯಾಗಿವೆ.

ರಾಯಚೂರಿನಲ್ಲಿ, ಬಿತ್ತನೆ ಮಾಡಿದ ಬೆಳೆಯು 59 ದಿನಗಳದಾಗಿದ್ದು, ಸದ್ಯ ಮೊಗ್ಗು ಕಟ್ಟುವ ಹಂತದಲ್ಲಿದೆ. ಮಳೆಯ ಅಭಾವದಿಂದಾಗಿ ಹತ್ತಿ ಗಿಡಗಳು ವಿವಿಧ ಹಂತದಲ್ಲಿ ಒಣಗುತ್ತಿವೆ; ಆದಾಗ್ಯೂ, ಆರಂಭದಲ್ಲಿ ಬಿತ್ತನೆ ಮಾಡಿದ ಬೆಳೆಯು ಬರ ಪರಿಸ್ಥಿತಿಯನ್ನು ತಡೆದುಕೊಳ್ಳುತ್ತಿದೆ. ಒಟ್ಟಾರೆಯಾಗಿ, ಶೇ. 25-30 ರಷ್ಟು ಹತ್ತಿ ಬೆಳೆಯುವ ಪ್ರದೇಶವು ನೀರಾವರಿ ಸೌಲಭ್ಯವನ್ನು ಹೊಂದಿದೆ. ಬೆಳೆಗಳ ನಡುವಿನ ಅಂತರ-ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವುದರ ಜೊತೆಗೆ, ರಸ ಹೀರುವ ಕೀಟಗಳ ನಿಯಂತ್ರಣಕ್ಕಾಗಿ ಕೀಟನಾಶಕ ಸಿಂಪರಣೆಯನ್ನು ಸಹ ಮಾಡಲಾಗುತ್ತಿದೆ. ಥ್ರಿಪ್ಸ್ (ನುಸಿ) ಮತ್ತು ಹಿಟ್ಟು ತಿಗಣೆಗಳ (ಮೀಲಿ ಬಗ್) ಬಾಧೆಯು ಆರ್ಥಿಕ ಗರಿಷ್ಟ ಮಟ್ಟಕ್ಕಿಂತ (ETL) ಹೆಚ್ಚಾಗಿರುವುದು ವರದಿಯಾಗಿದೆ.

ಚಾಮರಾಜನಗರದಲ್ಲಿ, ಬೆಳೆಯು ಕಾಯಿ ಕಟ್ಟುವ ಹಂತದಿಂದ ಕಾಯಿ ಅಭಿವೃದ್ಧಿ ಹಂತದವರೆಗೆ 86 ರಿಂದ 101 ದಿನಗಳ ಅವಧಿಯಲ್ಲಿದೆ. ಈ ಹಂತದಲ್ಲಿ ಯೂರಿಯಾ ಗೊಬ್ಬರವನ್ನು ಮೇಲುಗೊಬ್ಬರವಾಗಿ ನೀಡುವುದು, ಕಳೆ ತೆಗೆಯುವುದು, ಅಂತರ ಬೇಸಾಯ ಮತ್ತು ಮಣ್ಣು ಏರಿಸುವ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಜಿಗಿ ಹುಳು (ಪ್ರತಿ 3 ಎಲೆಗಳಿಗೆ 4-6), ಹೇನುಗಳು (ಪ್ರತಿ 3 ಎಲೆಗಳಿಗೆ 25-40) ಮತ್ತು ಗುಲಾಬಿ ಕಾಯಿ ಕೊರಕದ ಬಾಧೆಯು ಶೇಕಡಾ 5 ಕ್ಕಿಂತ ಕಡಿಮೆ ಇರುವುದು ದಾಖಲಾಗಿದೆ.

**ಸಲಹೆ:**

ಧಾರವಾಡದಲ್ಲಿ, ಕಳೆ ನಿರ್ವಹಣೆಗಾಗಿ ರೈತರು ಕೈಯಿಂದ ಕಳೆ ತೆಗೆಯುವಿಕೆ ಮತ್ತು ಅಂತರ ಬೇಸಾಯ ಕ್ರಮಗಳನ್ನು ಕೈಗೊಳ್ಳಲು ಸಲಹೆ ನೀಡಲಾಗಿದೆ. ಮಣ್ಣಿನಲ್ಲಿ ತೇವಾಂಶವಿದ್ದು ಕೈಯಿಂದ ಕಳೆ ತೆಗೆಯಲು ಸಾಧ್ಯವಾಗದಿದ್ದಲ್ಲಿ, ಹುಲ್ಲು ಜಾತಿಯ (ಏಕದಳ) ಕಳೆಗಳಿದ್ದರೆ 'ಕ್ವಿಜಾಲೋಫಾಪ್ ಈಥೈಲ್ 5% ಇಸಿ' (ಪ್ರತಿ ಲೀಟರ್ ನೀರಿಗೆ 2 ಮಿ.ಲೀ.) ಅನ್ನು, ಅಗಲ ಎಲೆಯ (ದ್ವಿದಳ) ಕಳೆಗಳಿದ್ದರೆ 'ಪೈರಿಥಿಯೋಬಾಕ್ ಸೋಡಿಯಂ 10% ಇಸಿ' (ಪ್ರತಿ ಲೀಟರ್ ನೀರಿಗೆ 1.5 ಮಿ.ಲೀ.) ಅನ್ನು, ಅಥವಾ ಎರಡೂ ಬಗೆಯ ಕಳೆಗಳನ್ನು ನಿಯಂತ್ರಿಸಲು 'ಪೈರಿಥಿಯೋಬಾಕ್ ಸೋಡಿಯಂ 6% + ಕ್ವಿಜಾಲೋಫಾಪ್ ಈಥೈಲ್ 4% ಎಂಇಸಿ' (ಪ್ರತಿ ಲೀಟರ್ ನೀರಿಗೆ 2-2.5 ಮಿ.ಲೀ.) ಅನ್ನು ಸಿಂಪಡಿಸಿ. ರಂಜಕ ಮತ್ತು ಪೊಟ್ಯಾಶ್‌ನ್ನು 'ರಿಂಗ್ ವಿಧಾನ'ದ (ಗಿಡದ ಸುತ್ತಲೂ ಉಂಗುರಾಕಾರದಲ್ಲಿ ಹಾಕುವ ವಿಧಾನ) ಮೂಲಕ ಒದಗಿಸಿ. ರಸ ಹೀರುವ ಕೀಟಗಳ ನಿರ್ವಹಣೆಗೆ ಬೇವಿನ ಆಧಾರಿತ ಕೀಟನಾಶಕವನ್ನು (ಪ್ರತಿ ಲೀಟರ್ ನೀರಿಗೆ 5.0 ಮಿ.ಲೀ.)

ಸಿಂಪಡಿಸಿ. ಬಿತ್ತನೆಯಾದ 60 ದಿನಗಳ ನಂತರ, ರಸ ಹೀರುವ ಕೀಟಗಳ ಹಾವಳಿ ಆರ್ಥಿಕ ಗರಿಷ್ಠ ಮಟ್ಟವನ್ನು ಮೀರಿದರೆ, 'ಫ್ಲೋನಿಕಾಮಿಡ್ 50 ಡಬ್ಲ್ಯೂಜಿ' (ಪ್ರತಿ ಲೀಟರ್ ನೀರಿಗೆ 0.4 ಗ್ರಾಂ) ಅಥವಾ 'ಡೈಫೆಂಥಿಯುರಾನ್ 50 ಡಬ್ಲ್ಯೂಪಿ' (ಪ್ರತಿ ಲೀಟರ್ ನೀರಿಗೆ 1.2 ಗ್ರಾಂ) ಅನ್ನು ಸಿಂಪಡಿಸಿ. ಗುಲಾಬಿ ಕಾಯಿ ಕೊರಕದ ಚಟುವಟಿಕೆಯನ್ನು ಗಮನಿಸಲು ಎಕರೆಗೆ 2 ರಂತೆ ಫೆರೋಮೋನ್ (ಲಿಂಗಾಕರ್ಷಕ) ಬಲೆಗಳನ್ನು ಅಳವಡಿಸಬೇಕು.

ರಾಯಚೂರಿನಲ್ಲಿ, ಭೂಮಿ ಒಣಗುವುದನ್ನು ತಡೆಯಲು ಕಳೆ ತೆಗೆಯುವಿಕೆ ಮತ್ತು ಅಂತರ ಬೇಸಾಯದ ಕೆಲಸಗಳನ್ನು ಆದ್ಯತೆಯ ಮೇರೆಗೆ ಕೈಗೊಳ್ಳುವಂತೆ ರೈತರಿಗೆ ಸಲಹೆ ನೀಡಲಾಗಿದೆ. ಮಣ್ಣಿನಲ್ಲಿ ತೇವಾಂಶವಿದ್ದು ಕೈಯಿಂದ ಕಳೆ ತೆಗೆಯಲು ಸಾಧ್ಯವಾಗದಿದ್ದಲ್ಲಿ, ಹುಲ್ಲು ಜಾತಿಯ ಕಳೆಗಳಿದ್ದರೆ 'ಕ್ವಿಜಾಲೋಫಾಪ್ ಈಥೈಲ್ 5% ಇಸಿ' (ಪ್ರತಿ ಲೀಟರ್ ನೀರಿಗೆ 2 ಮಿ.ಲೀ.) ಅಥವಾ ಅಗಲ ಎಲೆಯ ಕಳೆಗಳಿದ್ದರೆ 'ಪೈರಿಥಿಯೋಬಾಕ್ ಸೋಡಿಯಂ 10% ಇಸಿ' (ಪ್ರತಿ ಲೀಟರ್ ನೀರಿಗೆ 1.5 ಮಿ.ಲೀ.) ಬಳಸಬಹುದು; ಬೆಳೆಯು 25-30 ದಿನಗಳ ಅವಧಿಯಲ್ಲಿದ್ದಾಗ ಹುಲ್ಲು ಮತ್ತು ಅಗಲ ಎಲೆಯ ಕಳೆಗಳೆರಡನ್ನೂ ನಿಯಂತ್ರಿಸಲು 'ಪೈರಿಥಿಯೋಬಾಕ್ ಸೋಡಿಯಂ 6% + ಕ್ವಿಜಾಲೋಫಾಪ್ ಈಥೈಲ್ 4% ಎಂಇಸಿ' (ಪ್ರತಿ ಲೀಟರ್ ನೀರಿಗೆ 2-2.5 ಮಿ.ಲೀ.) ಸಿಂಪಡಿಸಬಹುದು. ರಸ ಹೀರುವ ಕೀಟಗಳ ಸಂಖ್ಯೆಯು ಆರ್ಥಿಕ ಹಾನಿ ಮಟ್ಟವನ್ನು (ETL) ಮೀರಿದಾಗ, ಶಿಫಾರಸು ಮಾಡಿದ ಪ್ರಮಾಣದಲ್ಲಿ 'ಫ್ಲೋನಿಕಮಿಡ್ 50% ಡಬ್ಲ್ಯೂಜಿ' (ಪ್ರತಿ 10 ಲೀಟರ್ ನೀರಿಗೆ 4 ಗ್ರಾಂ) ಸಿಂಪಡಿಸಿ. ಹಿಟ್ಟು ತಿಗಣೆ (ಮೀಲಿ ಬಗ್) ಬಾಧೆಯನ್ನು ನಿಯಂತ್ರಿಸಲು 'ಪ್ರೊಫೆನೋಫಾಸ್ 50 ಇಸಿ' (2.5 ಮಿ.ಲೀ.) ಅಥವಾ 'ಇಮಿಡಾಕ್ಲೋಪ್ರಿಡ್ 17.8 ಎಸ್‌ಎಲ್' (0.3 ಮಿ.ಲೀ.) ಅನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಿ.

ಚಾಮರಾಜನಗರದಲ್ಲಿ, ರಸ ಹೀರುವ ಕೀಟಗಳ ಮೇಲೆ ನಿಗಾ ಇಡಲು ರೈತರು ಪ್ರತಿ ಎಕರೆಗೆ 8-12 ರಂತೆ ಹಳದಿ ಅಂಟು ಬಲೆಗಳು ಮತ್ತು ಫೆರೋಮೋನ್ ಬಲೆಗಳನ್ನು ಅಳವಡಿಸಿಕೊಳ್ಳಬೇಕು ಹಾಗೂ ಫೆರೋಮೋನ್ ಬಲೆಗಳ ಆಕರ್ಷಕಗಳನ್ನು (lures) ಪ್ರತಿ 15 ದಿನಗಳಿಗೊಮ್ಮೆ ಬದಲಾಯಿಸಬೇಕು. ರಸ ಹೀರುವ ಕೀಟಗಳ ಸಂಖ್ಯೆ ಆರ್ಥಿಕ ಹಾನಿ ಮಟ್ಟವನ್ನು (ETL) ಮೀರಿದಾಗ, ಪ್ರತಿ ಲೀಟರ್ ನೀರಿಗೆ 0.4 ಮಿ.ಲೀ. ಫ್ಲೋನಿಕಮಿಡ್ 50% WG ಅಥವಾ 0.3 ಗ್ರಾಂ ಡಿನೋಟೆಫುರಾನ್ 20 SG ಅಥವಾ 0.5 ಮಿ.ಲೀ. ಇಮಿಡಾಕ್ಲೋಪ್ರಿಡ್ 17.8 SL ಅನ್ನು ಬೆರೆಸಿ ಸಿಂಪಡಿಸಬೇಕು. ಹೂವುಗಳು ಅಥವಾ ಕಾಯಿಗಳಲ್ಲಿ ಗುಲಾಬಿ ಕಾಯಿ ಕೊರಕದ ಬಾಧೆಯು ಶೇಕಡಾ 5 ಕ್ಕಿಂತ (ETL) ಹೆಚ್ಚಿದ್ದರೆ, ಪ್ರತಿ ಎಕರೆಗೆ 500 ಮಿ.ಲೀ. ಪ್ರೊಫೆನೋಫಾಸ್ 50 EC ಅಥವಾ 100 ಗ್ರಾಂ ಎಮಾಮೆಕ್ಟಿನ್ ಬೆಂಜೊಯೇಟ್ 5SG ಅಥವಾ 200 ಮಿ.ಲೀ. ಇಂಡೋಕ್ಸಾಕಾರ್ಬ್ 15 EC ಅನ್ನು ಸಿಂಪಡಿಸಬೇಕು.

| |
|---|
| ***ಭಾ. ಕೃ. ಅ. ಪ. – ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ*** |
| ***ಕನ್ನಡ ಅನುವಾದ*** |
| ***ಡಾ. ನೀಲಕಂಠ ಸ. ಹಿರೇಮನಿ*** |